8. ಮಂತ್ರಿಗಳ ಹೇಳಿಕೆ

ವಿಷಯ: (ಅ) ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯರುಗಳು ಹಾಗೂ ನೌಕರರುಗಳು ತಮ್ಮ ಬೇಡಿಕೆಗಾಗಿ ಮುಷ್ಕರ ಮಾಡುತ್ತಿರುವುದು.

+ಡಾ: ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಜಯದೇವ ಹೃದ್ರೋಗ ಸಂಸ್ಥೆ ಬಹಳ ಹೆಸರುವಾಸಿಯಾದಂತಹ ಸಂಸ್ಥೆ. ಬಹಳ ಉತ್ತಮವಾದಂತಹ ಸೇವೆಯನ್ನು ಅವರು ಮಾಡುತ್ತಿದ್ದಾರೆ. ಆದರೆ ದುರ್ದೈವದಿಂದ ಕೆಲವು ಅಹಿತಕರ ಘಟನೆಗಳು ಅಲ್ಲಿ ನಡೆಯುತ್ತಿದೆ. ಅಲ್ಲಿಯ ವೈದ್ಯರುಗಳು ಸುಮಾರು ಮೂರು ದಿವಸದಿಂದ ಮುಷ್ಕರ ನಡೆಸುತ್ತಿದ್ದಾರೆ. ನಿಜವಾಗಿಯೂ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿರತಕ್ಕಂಥ ರೋಗಿಗಳಿಗೆ ಈ ಮುಷ್ಕರದಿಂದ ಅನ್ಯಾಯ ಆಗಿಲ್ಲ. ನಾನು ಮಾನ್ಯ ಸದಸ್ಯರಾದಂತಹ ಸುಬ್ಬಾರೆಡ್ಡಿಯವರ ಜೊತೆಗೂಡಿ ಅಲ್ಲಿಗೆ ಹೋಗಿ ಮುಷ್ಕರ ನಿರತ ವೈದ್ಯರನ್ನು ಭೇಟಿ ಮಾಡಿದ್ದೇವೆ. ಅವರ ಬೇಡಿಕೆಗಳು ಏನು ಇದ್ದಾವೆ, ಅವರ ವ್ಯೂ ಏನು ಎಂಬ ಬಗ್ಗೆ ಸಹಾನುಭೂತಿಯಿಂದ ಕೇಳಿದ್ದೇವೆ. ಅವರ ವ್ಯೂ ಬಗ್ಗೆ ತಕ್ಷಣ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಅವರು ಏನು ಹೇಳುತ್ತಿದ್ದಾರೆ ಎಂದರೆ ನೇಮಕಾತಿ ಆಗಿರತಕ್ಕ ಸಂದರ್ಭದಲ್ಲಿ ಅಕ್ರಮ ಆಗಿದೆ, ಹಣದ ದುರ್ಬಳಕೆ ಆಗಿದೆ. ಹೀಗೆ ಅನೇಕ ಸಮಸ್ಯೆಗಳನ್ನು ಹೇಳಿ ಇನ್ನೂ ಅನೇಕ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಮುಷ್ಕರ ಮಾಡುತ್ತಿದ್ದರೂ ಸಹ ಅಲ್ಲಿನ ರೋಗಿಗಳಿಗೆ ಅವರು ತೊಂದರೆ ಮಾಡಿಲ್ಲ. ಯಾವುದೇ ರೋಗಿಗೆ ತೊಂದರೆ ಕೊಡದೇ ಅವರು ಮುಷ್ಕರ ಮಾಡುತ್ತಿದ್ದಾರೆ. ಅವರ ಇನ್ನೊಂದು ಬೇಡಿಕೆ ಎಂದರೆ, ನಿರ್ದೇಶಕರನ್ನು ತೆಗೆದು ಹಾಕಿ ಎಂದು. ಆದರೆ ಸರ್ಕಾರದಿಂದ ಈ ರೀತಿ ಏಕಾಏಕಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ತಕ್ಷಣ ಆಗುವುದಿಲ್ಲ, ಇದನ್ನು ವಿಚಾರ ಮಾಡಬೇಕಾಗುತ್ತದೆ ಎಂದು ತಿಳಿಸಿದ್ದೇನೆ. ಅಲ್ಲಿರತಕ್ಕ ಫಂಡ್ಸ್ ಮಿಸ್‌ಯೂಸ್ ಆಗಿದೆ ಅಥವಾ ಅದರಲ್ಲಿ ಅಕ್ರಮ ನಡೆದಿದೆ ಎಂದು, ಹೇಳಿದ್ದಾರೆ. ನಾವು ಎಲ್ಲಾ ವಿಚಾರವನ್ನೂ ತಿಳಿದುಕೊಂಡು ಒಂದು ಪ್ರತ್ಯೇಕವಾದಂತಹ ದಿನವನ್ನು ನಿಗದಿ ಮಾಡಿ ಈ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಇರತಕ್ಕ ಲೋಪಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ ಎಂದು ತಿಳಿಸಿದ್ದೇನೆ. ಇದು ಅವರಿಗೆ ಅರ್ಥ ಆಗಿದೆ ಎಂದು ಕಾಣುತ್ತದೆ. ಅವರು ಮುಷ್ಕರವನ್ನು ಹಿಂದೆ ತೆಗೆದುಕೊಳ್ಳಬಹುದು. ಗವರ್ನಿಂಗ್ ಬಾಡಿ ಬೇಡ, ಅದನ್ನು ಕ್ಯಾನ್ಸಲ್ ಮಾಡಿ ಎಂದು ಕೇಳಿದ್ದಾರೆ. ಇನ್ನು 2-3 ದಿವಸದಲ್ಲಿ ಈ ವಿಚಾರವಾಗಿ ಮೆಡಿಕಲ್ ಎಜುಕೇಶನ್ ಸೆಕ್ರೆಟರಿ ಜೊತೆ ಮಾತನಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(ಅ) ಸಹಕಾರ ಸಂಸ್ಥೆಗಳಲ್ಲಿ ನಾಮಿನೇಷನ್ ಮಾಡುವ ವಿಚಾರ

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಸದಾನಂದಗೌಡರು ಹಾಗೂ ಮಾನ್ಯ ವಿಶ್ವೇಶ್ವರ ಹೆಗಡೆಯವರು, ಮಾನ್ಯ ಪೂಜಾರ್‌ರವರು ಹಾಗೂ ಇತರರು ಸಹಕಾರ ಸಂಸ್ಥೆಗಳಲ್ಲಿ ನಾಮಿನೇಷನ್ ಮಾಡುವ ವಿಚಾರದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿ ಈ ದಿಸೆಯಲ್ಲಿ ಸರ್ಕಾರದ ನಿಲುವು

ಏನು ಎಂಬುದನ್ನು ಕೇಳಿದ್ದಾರೆ ಮತ್ತು ಈ ವಿಚಾರದ ಬಗ್ಗೆ ನಾವು ನೀಡಿದಂತಹ ದ್ವಂದ್ವ ಹೇಳಿಕೆಗಳ ಬಗ್ಗೆ ಕೂಡ ವ್ಯಾಪಕವಾದ ಚರ್ಚೆಯನ್ನು ಮಾಡಿದ್ದಾರೆ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಕಳೆದ ವಿಧಾನ ಸಭೆಯಲ್ಲೂ ಕೂಡ ಸದಸ್ಯರಾಗಿದ್ದರೂ. ಈ ಹೊಸ ಕಾಯ್ದೆ 1998ರ ಆಗಸ್ಟ್ 15ನೇ ತಾರೀಖಿನಿಂದ ಅಸ್ತಿತ್ವಕ್ಕೆ ಬಂದಿತು. ಈ ಕಾಯ್ದೆಯಲ್ಲಿ ದುರ್ಬಲ ವರ್ಗದವರಿಗೆ ಒಂದು, ಮಹಿಳೆಯರಿಗೆ ಒಂದು, ಹರಿಜನ ಗಿರಿಜನರಿಗೆ ಒಂದು ಹೀಗೆ ಮೂವರಿಗೆ ನಾಮಕರಣ ಮಾಡಲು ಅವಕಾಶ ಇದೆ. ಹಿಂದಿನ ಸರ್ಕಾರ 835 ಸಂಸ್ಥೆಗಳಿಗೆ, ಕೆಲವು ಕಡೆ ಒಂದು ಇರಬಹುದು, ಕೆಲವು ಕಡೆ ಮೂರು ಇರಬಹುದು, ನಾಮಕರಣ ಮಾಡಿತ್ತು. ಈ ಹೊಸ ಸರ್ಕಾರ ಬಂದ ಕೂಡಲೇ ಆ ನಾಮಕರಣವನ್ನು ನಾವು ವಾಪಸ್ ಪಡೆದಿದ್ದೇವೆ. ಸದ್ಯಕ್ಕೆ ಈ ಒಂದು ಹೊಸ ಕಾನೂನು ಇದೆ. ಕಳೆದ ವರ್ಷ ತಾನೇ ಇದು ಜಾರಿಗೆ ಬಂದಿದೆ. ಇದರಲ್ಲಿ ನಾಮಕರಣ ಮಾಡಲು ಅವಕಾಶ ಇರುತ್ತದೆ. ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಬೆಳಿಗ್ಗೆ ನಾವು ಚರ್ಚೆ ಮಾಡಿದಾಗ ಮಾನ್ಯ ಸಹಕಾರ ಸಚಿವರು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಅವರು ಈಗ ನೀಡಿದ ಉತ್ತರದಲ್ಲಿ ನಾಮಕರಣದ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಅವರು ಸ್ಪಷ್ಟಪಡಿಸಲಿಲ್ಲ. ಇದರಿಂದಾಗಿ ಈ ನಾಮಕರಣ ಮಾಡುವ ವಿಚಾರದಲ್ಲಿ ಸರ್ಕಾರ ಏನನ್ನೋ ಮುಚ್ಚಿಡುತ್ತಿದೆ ಎಂದು ನಮಗನ್ನಿಸುತ್ತಿದೆ. ಬೇರೆಯವರನ್ನು ನಾಮಕರಣ ಮಾಡಲಿಕ್ಕೆ ಸರ್ಕಾರ ವಿಚಾರ ಮಾಡುತ್ತಿದೆ ಎಂದು ಅನ್ನಿಸುತ್ತಿದೆ. ಯಾವುದೇ ಒಂದು ಸ್ಪಷ್ಟವಾದ ನಿಲುವನ್ನು ಸರ್ಕಾರ ಈ ಬಗ್ಗೆ ಪ್ರಕಟ ಮಾಡುತ್ತಿಲ್ಲ. ಮಾನ್ಯ ಅಧ್ಯಕ್ಷರು, ತಾವು ಹಿರಿಯರಾಗಿದ್ದೀರಿ, ತಾವು ಮಂತ್ರಿಗಳಿಗೆ ಸರಿಯಾದ ಉತ್ತರ ನೀಡಲು ಮಾರ್ಗದರ್ಶನ ಮಾಡಬೇಕೆಂದು ಕೋರುತ್ತೇನೆ. ಈ ಬಗ್ಗೆ ಇಷ್ಟೊಂದು ವಿವರವಾಗಿ ಚರ್ಚಿಸಿರುವಾಗ ಮಾನ್ಯ ಮಂತ್ರಿಗಳು ನಿರ್ದಿಷ್ಟವಾದ ಉತ್ತರವನ್ನು ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ಮಾನ್ಯ ಸಹಕಾರ ಸಚಿವರೇ, ಅಂತಿಮವಾಗಿ ಸರ್ಕಾರದ ನಿಲುವು ಏನು ಎಂಬುದನ್ನು ಹೇಳಿಬಿಡಿ.

ಶ್ರೀ ಡಿ.ಕೆ. ಶಿವಕುಮಾರ್: ನಾವು ಏನು ಮಾಡಬೇಕಾದರೂ ಈ ಕಾಯ್ದೆ ಬಿಟ್ಟು ಮಾಡಲು ಸಾಧ್ಯವಿಲ್ಲ. ನಾವು ಎಲ್ಲಾ ವಿಚಾರಗಳನ್ನೂ ಈ ಸಭೆಯ ಗಮನಕ್ಕೆ ತರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಹಿಂದಿನ ಸಹಕಾರ ಸಂಘಗಳ ಕಾಯ್ದೆ ಪ್ರಕಾರ ಹೋಗುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅಂದರೆ ನಾಮಕರಣ ಮಾಡುವುದು, ನಾಮಕರಣ ಮಾಡಿದವರಿಗೆ ಓಟಿಂಗ್ ಪವರ್ ನೀಡುವುದು ಇದೆಲ್ಲಾ ಇರುತ್ತದೆಯೇ? ಈ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಆಗಿದೆಯೇ?

ಅಧ್ಯಕ್ಷರು: ಮಾನ್ಯ ಸಚಿವರು ಕಾನೂನು ಪುಸ್ತಕದ ಪ್ರಕಾರ ನಾವು ಹೋಗುತ್ತೇವೆ ಎಂದು ಹೇಳಿದ್ದಾರೆ. ನಾವು ನೀವುಗಳು ಸೇರಿಯೇ ಈ ಕಾಯ್ದೆಯನ್ನು ರೂಪಿಸಿದ್ದೇವೆ. ಅದನ್ನು ಮೀರಿ ಹೋಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ಕಾಂಗ್ರೆಸ್ ಪಕ್ಷದವರು ಈ ಭಾಗದಲ್ಲಿ ನಾಮಕರಣ ಪದ್ಧತಿಗೆ ಅಷ್ಟೊಂದು ತೀವ್ರ ವಿರೋಧ ಮಾಡುತ್ತಿದ್ದರು. ಈಗ ಏನು ಅವರ ನಿಲುವು ಎಂಬುದನ್ನು ಹೇಳಲಿ. ನಾಮಕರಣದ ಬಗ್ಗೆ ಹಿಂದೆ ಆರ್ಡಿನೆನ್ಸ್ ಮಾಡಲಾಗಿತ್ತು. ಅದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದನ್ನು ಮಾನ್ಯ ಸಚಿವರು ಕ್ಲಾರಿಫೈ ಮಾಡಲಿ.

ಶ್ರೀ ಡಿ.ವಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೇ, ನಾವು ಇಲ್ಲಿ ಮಾತನಾಡುತ್ತಾ ಎರಡು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದೆವು. ಹೊಸ ಸರ್ಕಾರ ಬಂದಾಗ ಈ ಬಗ್ಗೆ ದ್ವಂದ್ವ ಹೇಳಿಕೆಗಳನ್ನು ನೀಡುತ್ತಿದೆ, ನಾವು ಹಿಂದಿದ್ದ ನಾಮಕರಣ ರದ್ದು ಮಾಡುತ್ತೇವೆ, ಹೊಸದಾಗಿ ನಾಮಕರಣ ಮಾಡುವುದಿಲ್ಲ, ಅವರಿಗೆ ವೋಟಿಂಗ್ ಪವರ್ ಕೊಡುವುದಿಲ್ಲ ಎಂದು ಬೇರೆ ಬೇರೆ ಕಡೆ ದ್ವಂದ್ವ ಹೇಳಿಕೆಗಳನ್ನು ಸರ್ಕಾರ ನೀಡಿದ್ದ ಕಾರಣ ನಾವು ಸರ್ಕಾರದ ಸ್ಪಷ್ಟ ನಿಲುವನ್ನು ಕೇಳುತ್ತಿದ್ದೇವೆ. ಈ ಕಾಯ್ದೆಂದು ಪುಸ್ತಕದ ಬಗ್ಗೆ ನಮಗೂ ಗೊತ್ತಿದೆ. ಇವತ್ತು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಂತಹ ಪತ್ರಿಕಾ ಹೇಳಿಕೆಗಳ ಆಧಾರದ ಮೇಲೆ ನಾಮಕರಣ ಪದ್ಧತಿಯ ಬಗ್ಗೆ ಸರ್ಕಾರದ ಸ್ಪಷ್ಟನೆಯನ್ನು ನಾವು ಕೇಳಿದೆವು. ಒಂದು ಕಡೆ ಸರ್ಕಾರ ಪುನರ್ ನಾಮಕರಣದ ಮಾತನಾಡುತ್ತಿದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟನೆ ಅಗತ್ಯ.

ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೇ, ಬಹುಶಃ ಮಾನ್ಯ ಚಂದ್ರೇಗೌಡರು ಮಾನ್ಯ ಸಹಕಾರ ಸಚಿವರಿಗೆ ದಾರಿಯನ್ನು ತಪ್ಪಿಸಿ ಈ ರೀತಿ ಉತ್ತರ ಕೊಡಿ ಎಂದು ಹೇಳಿಕೊಟ್ಟಿರಬಹುದು. ಮಾನ್ಯ ಸಹಕಾರ ಸಚಿವರನ್ನು ದಾರಿ ತಪ್ಪಿಸುವ ಕೆಲಸವನ್ನು ಅವರು ಮಾಡಬಾರದು. ಮಾನ್ಯ ಸಹಕಾರಿ ಸಚಿವರು ಯುವಕರೂ, ಉತ್ಸಾಹಿಗಳೂ ಆಗಿದ್ದಾರೆ. ಕ್ಯಾಬಿನೆಟ್ ಡಿಸಿಷನ್‌ಗೆ ನಾನು ಬದ್ಧ ಎಂದೂ ಕೂಡ ಅವರು ಹೇಳಿದ್ದಾರೆ. ಕ್ಯಾಬಿನೆಟ್‌ನಲ್ಲಿ ನಾಮಕರಣ ಪದ್ಧತಿ ರದ್ದು ಮಾಡಲು ತೀರ್ಮಾನಿಸಿದ್ದರೆ ಅದನ್ನು ಕಾರ್ಯಗತಗೊಳಿಸಬೇಕು. ಅದರ ಬದಲು ಮಾನ್ಯ ಸಚಿವರು ಆಕ್ಟ್‌ನಲ್ಲಿ ಈ ರೀತಿ ಇದೆ ಎಂದು ಹೇಳಿದರೆ ಹೇಗೆ? ನಾಮಕರಣ ಮಾಡುವುದಿಲ್ಲ ಎನ್ನುವುದಾದರೆ ಅದನ್ನಾದರೂ ಸರ್ಕಾರ ಸ್ಪಷ್ಟವಾಗಿ ಹೇಳಲಿ. ಅಥವಾ ನಾವು ಒತ್ತಾಯಿಸಿದಂತೆ ಈ ಬಗ್ಗೆ ಸದನ ಸಮಿತಿಯನ್ನಾದರೂ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಸಹಕಾರ ಸಚಿವರಾದ ಶಿವಕುಮಾರ್‌ರವರು ನೀಡಿದಂತಹ ಹೇಳಿಕೆಯೊಂದು ದಿನಾಂಕ 3.11.99ರ ' ಕನ್ನಡ ಪ್ರಭ ' ದಿನಪತ್ರಿಕೆಯಲ್ಲಿ ಬಂದಿದೆ. ಅದನ್ನು ನಾನು ಚರ್ಚೆ ಮಾಡುವಾಗ ಓದಿದ್ದೆ. ಈಗ ಮತ್ತೊಮ್ಮೆ ಓದಿ ಬಿಡುತ್ತೇನೆ. " ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಸದಸ್ಯರನ್ನು ಇನ್ನು 15 ದಿನಗಳಲ್ಲಿ ಆಯ್ಕೆ ಮಾಡಲಾಗುವುದು ಎಂದು ಸಹಕಾರಿ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯು ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿದ್ದ ಅವರು ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡಲು ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿ ಇನ್ನು 15 ದಿನಗಳಲ್ಲಿ ವರದಿ ನೀಡಲಿದೆ ಎಂದರು." ಈ ಸಮಿತಿಯ ವರದಿಯನ್ನು ಪಡೆದುಕೊಂಡು ಮುಂದಿನ 15 ದಿನಗಳಲ್ಲಿ ನಾಮಕರಣ ಮಾಡುತ್ತೇವೆ ಎಂದು ಮಾನ್ಯ ಸಚಿವರು ಆ ಸಮಾರಂಭದಲ್ಲಿ ಹೇಳಿದ್ದಾರೆ. ಸರ್ಕಾರ ತನ್ನ ಸ್ಪಷ್ಟ ನಿಲುವನ್ನು

ಈಗ ಹೇಳದೇ ಇರುವ ಕಾರಣ ಸರ್ಕಾರ ನಾಮಕರಣ ಮಾಡಬಹುದು ಎಂಬ ಅನುಮಾನ ನಮ್ಮನ್ನು ಕಾಡುತ್ತಿದೆ. ಕಡೆಯ ಪಕ್ಷ ಮುಂದಿನ ಅಧಿವೇಶನದವರೆಗೂ ಈ ದಿಶೆಯಲ್ಲಿ ನಾಮಕರಣ ಏನೂ ಮಾಡುವುದಿಲ್ಲ, ಈಗಿರುವುದನ್ನು ಮುಂದುವರೆಸಿಕೊಂಡು ಹೋಗುತ್ತೇವೆ ಎಂಬುದನ್ನಾದರೂ ಸರ್ಕಾರ ಹೇಳಲಿ. ನಾಮಕರಣ ಮಾಡಲು ಈಗ ಏನು ಅಂತಹ ಅರ್ಜೆಂಟ್ ಸರ್ಕಾರಕ್ಕೆ ಇದೆ.

ಶ್ರೀ ಡಿ.ಕೆ. ಶಿವಕುಮಾರ್: ತಾವೇ ಓದಿದಂತೆ ನನ್ನ ಹೇಳಿಕೆಯಲ್ಲಿ 15 ದಿನಗಳಲ್ಲಿ ನಮ್ಮ ಪಕ್ಷದಲ್ಲಿ ಈ ಬಗ್ಗೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಗುಜರಾತ್ ರಾಜ್ಯದ ಆಕ್ಟ್ ನನ್ನ ಬಳಿ ಇದೆ. ಅದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಅಲ್ಲಿ ಮೂರು ಜನರಿಗೆ ನಾಮಕರಣ ಮಾಡಲು ಅವಕಾಶ ಇದೆ. ಆಂಧ್ರಪ್ರದೇಶದ ಆಕ್ಟ್ ಕೂಡ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಅಲ್ಲೂ ಕೂಡ ಮೂರನೇ ಒಂದು ಭಾಗ ನಾಮಕರಣಕ್ಕೆ ಅವಕಾಶ ಇದೆ. ಮಧ್ಯಪ್ರದೇಶದಲ್ಲಿ ಮೂರು ಜನ ನಾಮಕರಣ ಮಾಡಲಿಕ್ಕೆ ಅವಕಾಶ ಇದೆ. ಕೇರಳ, ಮಹಾರಾಷ್ಟ್ರ, ಉತ್ತರ ಪ್ರದೇಶಗಳಲ್ಲಿ ಇಬ್ಬರು ಜನರು ಮೀರದಂತೆ ನಾಮಕರಣ ಮಾಡಲಿಕ್ಕೆ ಅವಕಾಶ ಇದೆ. ನಾನು ಈಗ ಬೇರೆ ರಾಜ್ಯಗಳ ವಿಚಾರಕ್ಕೆ ಚರ್ಚೆ ಮಾಡಲು ಹೋಗುವುದಿಲ್ಲ. ನಾಮಕರಣ ಸದಸ್ಯರಿಗೆ ಓಟಿಂಗ್ ಪವರ್ ಕೊಡುವುದರ ಬಗ್ಗೆ ಹಿಂದಿನ ಸರ್ಕಾರ ತಂದಿದ್ದ ಆರ್ಡಿನೆನ್ಸ್ ಈಗ ಲ್ಯಾಪ್ಸ್ ಆಗಿದೆ. ಈಗ ನಾವು ಈ ದಿಸೆಯಲ್ಲಿ ಹೊಸದಾಗಿ ಏನಾದರೂ ಚಿಂತನೆ ಮಾಡುವುದಿದ್ದರೆ ಖಂಡಿತಾ ನಾವು ಅದನ್ನು ಸದನದ ಮುಂದೆ ತರುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ: ಮಾನ್ಯ ಅಧ್ಯಕ್ಷರೇ, ಈ ಬಸ್ ದರ ಏರಿಕೆಯ ವಿಚಾರದಲ್ಲಿ ಸರ್ಕಾರ ಇದೇ ರೀತಿಯ ಭರವಸೆ ಕೊಟ್ಟಿತ್ತು. ಆದರೆ ಹಾಗೆ ನಡೆದುಕೊಳ್ಳಲಿಲ್ಲ. ಈಗಲೂ ಅದೇ ರೀತಿ ಆಗಬಾರದು.

ಅಧ್ಯಕ್ಷರು: ಏನೇ ಇದ್ದರೂ ನಿಮ್ಮ ಮುಂದೆ ತರುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಒಂದು ವೇಳೆ ಮಾನ್ಯ ಸಚಿವರನ್ನು ಮಿಸ್‌ಗೈಡ್ ಮಾಡಿದ್ದರೆ ಈಗ ಮಾನ್ಯ ವಿಶ್ವೇಶ್ವರಯ್ಯನವರು ಅವರಿಗೆ ಗೈಡ್ ಮಾಡಿದ್ದಾರೆ.

ಅಧ್ಯಕ್ಷರು: ಈ ಬಗ್ಗೆ ಮಾನ್ಯ ಸಚಿವರು ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಈ ವಿಷಯದ ಚರ್ಚೆ ಇಲ್ಲಿಗೇ ಮುಕ್ತಾಯ ಮಾಡೋಣ. ಈಗ ನಾನು ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಮತ್ತೆ ಬೆಳಿಗ್ಗೆ 9.30ಕ್ಕೆ ಸಮಾವೇಶಗೊಳ್ಳಲಿದೆ.

(ಸದನವು ಸಂಜೆ 6 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 13.11.99 ರಂದು ಬೆಳಿಗ್ಗೆ 9.30 ಗಂಟೆಗೆ ಗಂಟೆಗೆ ಪುನರ್ ಸಮಾವೇಶಗೊಳ್ಳಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.